ಹುಲಿ ಸಂರಕ್ಷಣೆ ಸವಾಲು

ಭಾರತದಲ್ಲಿ ಈ ವರ್ಷ 77 ಹುಲಿ ಸಾವಿನ ಪ್ರಕರಣಗಳು ನಡೆದಿವೆ. ಕಾಡಿನ ಪ್ರಮಾಣ ಕಡಿಮೆ ಆಗುತ್ತಿರುವುದರಿಂದ ದೇಶದಲ್ಲಿ ವ್ಯಾಘ್ರಗಳ ಭವಿಷ್ಯಕ್ಕೆ ಅಪಾಯವೂ ಎದುರಾಗಿದೆ. ಇಂತಹ ಸ್ಥಿತಿಯಲ್ಲಿ ಹುಲಿ ಸಂರಕ್ಷಣೆ ಹೇಗೆ? ಸವಾಲುಗಳನ್ನು ಎದುರಿಸುವುದು ಎಂತು?

ಕಳ್ಳಬೇಟೆಯಿಂದ ಕುತ್ತು

ಯತೀಶ್ ಕುಮಾರ್ ಜಿ.ಡಿ
ಪ್ರಜಾವಾಣಿ, ಬೆಂಗಳೂರು

ಕಾಡಿಗೆ ಹೋದಾಗ ಆನೆ, ಚಿರತೆ, ಕರಡಿ ಕಂಡರೂ ಪಟ್ಟೆ ಹುಲಿ ಕಾಣದಿದ್ದರೆ ಪ್ರವಾಸಿಗರು ಬೇಸರ ಮಾಡಿಕೊಂಡು, 'ಹುಲಿ ಬಾಲವನ್ನಾದರೂ ತೋರಿಸಿ' ಎಂದು ಗೈಡ್‌ಗೆ ದುಂಬಾಲು ಬೀಳುವುದನ್ನು ಕಂಡಿದ್ದೇನೆ. ಕೆಲವೊಮ್ಮೆ ಹಲವು ಸಲ ಕಾಡು ಸುತ್ತಿದರೂ ವ್ಯಾಘ್ರನ ದರ್ಶನ ಆಗುವುದಿಲ್ಲ. ಇಂತಹ ಸಂದರ್ಭದಲ್ಲಿ ಹುಲಿ ಸಂಖ್ಯೆ ಬಗ್ಗೆ ಅನುಮಾನ ಮೂಡುತ್ತದೆ.

ಭಾರತದ ಕಾಡುಗಳಲ್ಲಿ 2,226 ಹುಲಿಗಳಿವೆ. ಇದು ವಿಶ್ವದಲ್ಲೇ ಅತಿ ಹೆಚ್ಚು ಎಂದು ಕೇಂದ್ರ ಸರ್ಕಾರ ಬೀಗುತ್ತಿದೆ. ಆದರೆ, ಈ ಅಂಕಿಯನ್ನು ಕೆಲ ಸರ್ಕಾರೇತರ ಸಂಸ್ಥೆಗಳು ಅಲ್ಲಗಳೆದು, ಲೆಕ್ಕಾಚಾರದಲ್ಲೇ ತಪ್ಪಾಗಿದೆ ಎಂದು ವಾದಿಸುತ್ತಿವೆ. ಅದೇನೆ ಇದ್ದರೂ, 'ಅಂತರರಾಷ್ಟ್ರೀಯ ಮಟ್ಟದಲ್ಲಿ ಹುಲಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದ್ದರೂ, ಕಾಡಿನ ಗುಣಮಟ್ಟ ಕುಸಿತ, ರಸ್ತೆ ನಿರ್ಮಾಣ ಸೇರಿದಂತೆ ಮರ ಕಡಿತದಂತಹ ಅನೇಕ ಕಾರಣಗಳಿಂದ ಕಾಡಿನಿಂದ ಹೊರಬರುತ್ತಿರುವ ಹುಲಿಗಳು ಅಪಾಯ ಎದುರಿಸುತ್ತಿವೆ' ಎಂದು ಅಂತರರಾಷ್ಟ್ರೀಯ ನಿಸರ್ಗ ಸಂರಕ್ಷಣಾ ಸಂಸ್ಥೆ (ಐಯುಸಿಎನ್) ಎಚ್ಚರಿಕೆ ನೀಡಿದೆ. ಇದಕ್ಕೆ ಪೂರಕವಾಗಿ, ಈ ವರ್ಷವೇ 77 ಹುಲಿಗಳು ಸತ್ತಿವೆ ಎಂದು ಕೇಂದ್ರ ಸರ್ಕಾರ ಲೋಕಸಭೆಗೆ ಮಾಹಿತಿ ನೀಡಿದೆ. ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯದ ಅಡಿಯಲ್ಲಿರುವ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ (ಎನ್‌ಟಿಸಿಎ) ಪ್ರಕಾರ ಹುಲಿ ಕಣ್ಮರೆಗೆ ಕಳ್ಳಬೇಟೆ, ಮಾನವ– ಹುಲಿ ಸಂಘರ್ಷ, ಕಿರಿದಾಗುತ್ತಿರುವ ಅರಣ್ಯ, ಅರಣ್ಯಗಳ ನಡುವಿನ ಕಾರಿಡಾರ್ ನಾಶ ಕಾರಣ. ಇದರ ಜೊತೆಯಲ್ಲಿ ಪ್ರದೇಶ ಪ್ರಾಬಲ್ಯಕ್ಕಾಗಿ ಹುಲಿಗಳ ನಡುವೆ ನಡೆಯುವ ಹೋರಾಟವೂ ಅವುಗಳ ಸಾವಿಗೆ ಕಾರಣ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಹೇಳುವುದಾದರೆ ಚೀನಾದ ಪಾರಂಪರಿಕ ಔಷಧ ಮಾರುಕಟ್ಟೆಯಲ್ಲಿರುವ ಬೇಡಿಕೆಯಿಂದಾಗಿ ದೊಡ್ಡ ಮಟ್ಟದಲ್ಲಿ ಹುಲಿ ಬೇಟೆ ನಡೆಯುತ್ತಿದೆ. 1993ರಲ್ಲಿ ಹುಲಿಯ ವಹಿವಾಟಿಗೆ ಚೀನಾ ನಿಷೇಧ ಹೇರಿದ್ದರೂ ಕಳ್ಳ ಮಾರ್ಗದಲ್ಲಿ ವಹಿವಾಟು ನಡೆಯುತ್ತಿದೆ. ಮುಂಗುಸಿಯ ಕೂದಲು, ಹಾವಿನ ಚರ್ಮ, ಘೇಂಡಾಮೃಗದ ಕೊಂಬು, ಹುಲಿ ಮತ್ತು ಚಿರತೆ ಚರ್ಮ, ಉಗುರು, ಆಮೆ ಚಿಪ್ಪು, ಆನೆ, ಜಿಂಕೆಯ ಕೊಂಬಿನ ಸಂಘಟಿತ ಅಕ್ರಮ ವಹಿವಾಟೇ ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿದೆ. ಈ ವಹಿವಾಟು ಭಾರತದಲ್ಲಿ ಅಕ್ರಮ. ಇಲ್ಲಿಂದ ನೇಪಾಳ, ಬಾಂಗ್ಲಾ ಕಳ್ಳಮಾರ್ಗದ ಮೂಲಕ ಅನ್ಯರಾಷ್ಟ್ರಗಳನ್ನು ತಲುಪಿ ಅಲ್ಲಿಂದ ಚೀನಾ ಸೇರುತ್ತವೆ.

ಇಂತಹ ಪ್ರಾಣಿಜನ್ಯ ವಸ್ತುಗಳಿಗೆ ಚೀನಾ ಬೃಹತ್ ಮಾರುಕಟ್ಟೆಯಾಗಿದೆ. ಹುಲಿಯ ಪ್ರತಿ ಅಂಗಕ್ಕೂ ಕಳ್ಳ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆಯಿದೆ. ಕೀಲುನೋವು, ಮೂರ್ಛೆರೋಗ ನಿವಾರಕ ಹಾಗೂ ಪುರುಷಶಕ್ತಿವರ್ಧಕವಾಗಿ ಪರಿಣಾಮಕಾರಿ ಎನ್ನುವ ನಂಬಿಕೆಯಿಂದ ಹುಲಿ ಮೂಳೆ ಬಳಕೆಯಾಗುತ್ತಿದೆ. ಹುಲಿ ಚರ್ಮವನ್ನು ಆಲಂಕಾರಿಕವಾಗಿ ಬಳಸಲಾಗುತ್ತದೆ. ಈ ನಂಬಿಕೆಗಳೇ ಹುಲಿಯಂತಹ ಪ್ರಾಣಿಗಳು ಅವನತಿಯತ್ತ ತಲುಪಲು ಕಾರಣ ಎನ್ನಬಹುದು. ನೂರು ವರ್ಷಗಳ ಹಿಂದೆ ಜಗತ್ತಿನಲ್ಲಿ ಒಂದು ಲಕ್ಷದಷ್ಟಿದ್ದ ಹುಲಿಗಳ ಸಂಖ್ಯೆ ಇದೀಗ 3,890ಕ್ಕೆ ಇಳಿದಿದೆ.

ದಕ್ಷಿಣ ಭಾರತದಲ್ಲಿ ಹುಲಿ ಕಳ್ಳಬೇಟೆಯಲ್ಲಿ ತೊಡಗಿರುವ ಸಂಘಟಿತ ಗುಂಪುಗಳಿಲ್ಲ. ಉತ್ತರ ಭಾರತದಲ್ಲಿ ಸಕ್ರಿಯವಾಗಿದ್ದ ಗುಂಪುಗಳು ಇದೀಗ ಛಿದ್ರವಾಗಿವೆ. ಕಳ್ಳಬೇಟೆ ಮತ್ತು ಸಾಗಣೆಯಲ್ಲಿ ತೊಡಗಿದ್ದ ಸಂಸಾರ್‌ಚಂದ್ 2014ರಲ್ಲಿ ಹತನಾದ. ಈತ 'ಉತ್ತರ ಭಾರತದ ವೀರಪ್ಪನ್' ಎಂದೇ ಕುಖ್ಯಾತ. ಈತನ ಮಗ ಆಕಾಶ್‌ನನ್ನು 2016ರ ಜುಲೈನಲ್ಲಿ ದೆಹಲಿ ಅಪರಾಧ ದಳವು ದಕ್ಷಿಣ ದೆಹಲಿಯಲ್ಲಿ ಬಂಧಿಸಿತು.

ನಾಗರಹೊಳೆಯ ಡಿ.ಬಿ.ಕುಪ್ಪೆ ವಲಯದಲ್ಲಿ 2001ರಲ್ಲಿ 'ಜಾ ಟ್ರ್ಯಾಪ್' ಪ್ರಕರಣ ಪತ್ತೆಯಾಯಿತು. ಮುಂಗಾಲಿಗೆ ಜಾ ಟ್ರ್ಯಾಪ್ ಸಿಕ್ಕಿಹಾಕಿಕೊಂಡಿದ್ದ ಭಾರಿ ಹುಲಿ ಟ್ರ್ಯಾಪ್ ಎಳೆದುಕೊಂಡು ಓಡಾಡುತ್ತಿತ್ತು. ಹುಲಿಗೆ ಅರಿವಳಿಕೆ ನೀಡಿ ಮೈಸೂರು ಮೃಗಾಲಯಕ್ಕೆ ರವಾನಿಸಲಾಯಿತು. ಇದರ ತನಿಖೆ ನಡೆದಾಗ ಉತ್ತರ ಭಾರತದ ಖಟ್ನಿ ಬುಡಕಟ್ಟು ಗುಂಪು ಇದರ ಹಿಂದೆ ಇತ್ತು ಎನ್ನುವುದು ಪತ್ತೆಯಾಯಿತು. ಅರಣ್ಯದ ಅಂಚಿನಲ್ಲಿ ತಾತ್ಕಾಲಿಕ ಗುಡಿಸಲು ಹಾಕಿಕೊಂಡು ಗಿಡಮೂಲಿಕೆ ಔಷಧ, ಪ್ಲಾಸ್ಟಿಕ್ ಹೂ ಮಾರುವ ಸೋಗಿನಲ್ಲಿ ಇರುವ ಬುಡಕಟ್ಟು ಜನ, ಸ್ಥಳೀಯ ಅರಣ್ಯದಂಚಿನ ನಿವಾಸಿಗಳ ಜೊತೆ ಸ್ನೇಹ ಬೆಳೆಸಿ ಹುಲಿ ಓಡಾಟದ ಮಾಹಿತಿ ಪಡೆಯುತ್ತಿದ್ದರು. ನಂತರ ಜಾ ಟ್ರ್ಯಾಪ್ ಅಳವಡಿಸುತ್ತಿದ್ದರು. ಪ್ರಕರಣದಲ್ಲಿ 8 ಜನರ ಬಂಧನವಾಗಿತ್ತು.

ಇದೇ ರೀತಿಯ ಜಾ ಟ್ರ್ಯಾಪ್ ಅಳವಡಿಕೆ ಪ್ರಕರಣ 2012ರಲ್ಲಿ ಬಿಳಿಗಿರಿರಂಗನ ಬೆಟ್ಟದ ಗುಂಡಾಲ್ ಪ್ರದೇಶದಲ್ಲಿ ನಡೆಯಿತು. ಇದರಲ್ಲಿ ಹರಿಯಾಣದ ಗುಂಪು ಭಾಗಿಯಾಗಿತ್ತು. ಗುಂಪಿನ ಮಹಿಳೆಯರು ವ್ಯಾಪಾರದ ಸೋಗಿನಲ್ಲಿ ಅರಣ್ಯದಂಚಿನಲ್ಲಿ ತಂಗಿದ್ದರೆ, ಒಬ್ಬ ಪುರುಷ ದಟ್ಟ ಕಾಡಿಗೆ ನುಗ್ಗಿ ಹುಲಿ ಓಡಾಡುವ ಜಾಗದಲ್ಲೇ ಸರಿಯಾಗಿ ಟ್ರ್ಯಾಪ್ ಅಳವಡಿಸಿದ್ದ. ಆತ ಅದೆಷ್ಟು ನಿಖರವಾಗಿ ಟ್ರ್ಯಾಪ್ ಹಾಕಿದ್ದ ಎಂದರೆ, ಟ್ರ್ಯಾಪ್‌ನ ಹಿಂದೆ ದಾರಿಗೆ ಅಡ್ಡಲಾಗಿ ಕಡ್ಡಿಯಿಟ್ಟಿದ್ದ. ಸಾಮಾನ್ಯವಾಗಿ ಹುಲಿ ಇಂತಹ ಕಡ್ಡಿ ತುಳಿದು ಸದ್ದಾಗಲು ಅವಕಾಶ ನೀಡುವುದಿಲ್ಲ. ಅದನ್ನು ದಾಟಿ ಮುಂದೆ ಕಾಲಿಟ್ಟರೆ ಹುಲಿ ಟ್ರ್ಯಾಪ್‌ಗೆ ಬೀಳುತ್ತಿತ್ತು. ಟ್ರ್ಯಾಪ್‌ಗೆ ಸಿಕ್ಕಿದ ಹುಲಿಯ ಬಾಯಿಗೆ ಚೂಪಾದ ಬೆರ್ಜಿ ಚುಚ್ಚಿ ಅಮಾನುಷವಾಗಿ ಸಾಯಿಸುತ್ತಿದ್ದರು. ಆದರೆ ಟ್ರ್ಯಾಪ್ ಅನ್ನು ಆನೆಯೊಂದು ತುಳಿದು ಹಾಳು ಮಾಡಿತ್ತು. ಅದನ್ನು ಸರಿಪಡಿಸಲು ವಾಪಸ್ ಕಾಡಿನಂಚಿಗೆ ಬಂದಾಗ ಮಾಹಿತಿ ಆಧರಿಸಿ, ಅಂದು ವಲಯ ಅರಣ್ಯಾಧಿಕಾರಿಯಾಗಿದ್ದ ಕೆ.ಟಿ.ಬೋರಯ್ಯ ಮತ್ತು ತಂಡ ಆರು ಜನರನ್ನು ಬಂಧಿಸಿತ್ತು. ಅವರಿಗೆ 3 ವರ್ಷ ಜೈಲು ಶಿಕ್ಷೆಯಾಗಿತ್ತು ಎಂದು ಅರಣ್ಯ ಸಂರಕ್ಷಣಾಧಿಕಾರಿ ಎಸ್.ಲಿಂಗರಾಜು ಜ್ಞಾಪಿಸಿಕೊಳ್ಳುತ್ತಾರೆ.

ಕೆಲ ವರ್ಷಗಳ ಹಿಂದೆ ನಾಗರಹೊಳೆಯ ಡಿ.ಬಿ.ಕುಪ್ಪೆ ಅಂಚಿನಲ್ಲಿ ವಿಷಪ್ರಾಶನದಿಂದ ಹುಲಿ ಸತ್ತ ಘಟನೆ ಇನ್ನೂ ಸಿಐಡಿ ತನಿಖಾ ಹಂತದಲ್ಲೇ ಇದೆ. ಎನ್‌ಟಿಸಿಎ ಮಾಹಿತಿ ಪ್ರಕಾರ, ಈ ವರ್ಷ ಆಗಸ್ಟ್ 3ವರೆಗೆ ಎಂಟು ಹುಲಿ ಸಾವು ಪ್ರಕರಣಗಳು ರಾಜ್ಯದಲ್ಲಿ ದಾಖಲಾಗಿವೆ. ಇವುಗಳ ಪೈಕಿ ಮೂರು ಪ್ರಕರಣಗಳ ತನಿಖೆ ಪೂರ್ಣವಾಗಿಲ್ಲ. ಉಳಿದವು ನೈಸರ್ಗಿಕ ಸಾವು.

ಇದುವರೆಗೆ ಹಣ ಮಾಡುವ ಉದ್ದೇಶದಿಂದ ನಡೆಯುತ್ತಿದ್ದ ವ್ಯಾಘ್ರನ ಹತ್ಯೆ, ಇದೀಗ ಹೆಸರು ಮಾಡುವ ಉದ್ದೇಶದಿಂದಲೂ ನಡೆದಿರುವ ಅಂಶ ಬೆಳಕಿಗೆ ಬಂದಿದೆ. 2015ರ ಅಕ್ಟೋಬರ್‌ನಲ್ಲಿ ಖಚಿತ ಮಾಹಿತಿಯ ಮೇಲೆ ತಮಿಳುನಾಡಿನ ಸತ್ಯಮಂಗಲದಿಂದ ಚಾಮರಾಜನಗರದ ಪುಣಜೂರು ಕಡೆ ಬರುತ್ತಿದ್ದ ನಾಲ್ವರಿಂದ ಆರು ಕೆ.ಜಿ ಹುಲಿ ಮೂಳೆ ಮತ್ತು ಹಸಿ ಮಾಂಸವನ್ನು ಅರಣ್ಯ ಇಲಾಖೆ ಸಿಬ್ಬಂದಿ ವಶಪಡಿಸಿಕೊಂಡಿದ್ದರು. ಇವರನ್ನು ವಿಚಾರಣೆಗೆ ಗುರಿಪಡಿಸಿದಾಗ, ತಮಿಳುನಾಡಿನ ವನ್ಯಜೀವಿ ಸಂಘಟನೆಯ ಸದಸ್ಯನೊಬ್ಬ ಹಣ ನೀಡಿ ಹುಲಿ ಹತ್ಯೆ ಮಾಡಲು ಇವರಿಗೆ ಪ್ರಚೋದನೆ ನೀಡಿದ್ದ ಎನ್ನುವ ಮಾಹಿತಿ ದೊರಕಿತ್ತು.

ಗುತ್ತಿಗೆ ನೌಕರರೇ ತುಂಬಿರುವ ಕೆಳಹಂತದ ಸಿಬ್ಬಂದಿ, ವಾಹನ ಮತ್ತು ಬಂದೂಕು ಕೊರತೆ ಅರಣ್ಯ ಇಲಾಖೆಯನ್ನು ಕಾಡುತ್ತಿದೆ. ರಾಜ್ಯ ಸರ್ಕಾರ ಅತಿ ಕಡಿಮೆ ಅನುದಾನ ನೀಡುವ ಇಲಾಖೆಯಲ್ಲಿ ಅರಣ್ಯವೂ ಒಂದು. ಇಂತಹ ಸ್ಥಿತಿಯಲ್ಲೂ ಸಂರಕ್ಷಣಾ ಕಾರ್ಯ ನಡೆಯುತ್ತಿದೆ. ರಾಜ್ಯದಲ್ಲಿ ಹುಲಿಗಳ ಸಂಖ್ಯೆ ದೇಶದಲ್ಲೇ ಅತಿ ಹೆಚ್ಚಿದೆ. ಕಾಡಿನ ಸಂರಕ್ಷಣೆಯಾದರೆ ವನ್ಯಜೀವಿಗಳ ಸಂರಕ್ಷಣೆಯಾಗುತ್ತದೆ. ಮಾಂಸಾಹಾರಿ ಪ್ರಾಣಿಗಳ ಸಂಖ್ಯೆ ಹೆಚ್ಚಾದರೆ ಬಲಿ ಪ್ರಾಣಿಗಳು ಹೆಚ್ಚಾಗಿವೆ ಎಂದರ್ಥ. ಸಂರಕ್ಷಣೆ ಮತ್ತಷ್ಟು ಸಮರ್ಪಕವಾಗಿ ನಡೆಯಲು ಸರ್ಕಾರದ ಜೊತೆ ಖಾಸಗಿ ಅನುದಾನವೂ ದೊರಕಬೇಕು.

ದಕ್ಷಿಣ ಭಾರತದಲ್ಲಿ ಇಲ್ಲ

ಕಳ್ಳವ್ಯಾಪಾರಕ್ಕಾಗಿ ಹುಲಿಗಳನ್ನು ಕೊಲ್ಲುವ ಯಾವುದೇ ಪ್ರಕರಣ ದಕ್ಷಿಣ ಭಾರತದಲ್ಲಿ ದಾಖಲಾಗಿಲ್ಲ.

ಆದರೆ ಹುಲಿ ಕಾಡಿನಿಂದ ಹೊರಹೋದಾಗ ವಿವಿಧ ಕಾರಣಗಳಿಂದ ಹತ್ಯೆಗಳು ನಡೆದಿವೆ.

ಪಿ.ಎಸ್.ಸೋಮಶೇಖರ್, ಐಜಿ, ದಕ್ಷಿಣ ವಲಯ, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ



ಇನ್ನೂ ಕಾಲ ಮಿಂಚಿಲ್ಲ

ಪ್ರವೀಣ್ ಭಾರ್ಗವ್
ವ್ಯವಸ್ಥಾಪಕ ಟ್ರಸ್ಟಿ, ವೈಲ್ಡ್‌ಲೈಫ್ ಫಸ್ಟ್

ಹುಲಿಯೊಂದು ಸತ್ತಾಗ, ಅವುಗಳ ಸಂರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸುವವರ ಸಂಖ್ಯೆ ದೊಡ್ಡದಿದೆ. ಆದರೆ, ಮೂಲ ಪ್ರಶ್ನೆ ಅದಲ್ಲ. ಹುಲಿಗಳ ಆವಾಸಸ್ಥಾನ ಏನಾಗುತ್ತಿದೆ ಎಂಬ ಬಗ್ಗೆ ನಾವು ಗಮನ ಹರಿಸಬೇಕು. ಮಾನವನ ಹಸ್ತಕ್ಷೇಪ ಇಲ್ಲದ, ಹುಲ್ಲೆಗಳ ಸಂತತಿಯೂ ಸಾಕಷ್ಟಿರುವ ಸಮೃದ್ಧ ನೆಲೆ ಎಲ್ಲಿದೆ ಎಂಬುದು ಮುಖ್ಯ. ಇವೆರಡೂ ಇಲ್ಲದಿದ್ದರೆ ಹುಲಿಗಳನ್ನು ನಾವು ಶಾಶ್ವತವಾಗಿ ಕಳೆದುಕೊಳ್ಳಬೇಕಾಗುತ್ತದೆ. ಇಂತಹ ನೆಲೆಗಳನ್ನು ಸಂರಕ್ಷಿಸಲು ಏನು ಕ್ರಮ ಕೈಗೊಂಡಿದ್ದೇವೆ ಎಂಬುದು ಹುಲಿಗಳನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಮುಖವಾದುದು.

ಹುಲಿಗಳ ನೆಲೆಗಳು ಕುತ್ತು ಎದುರಿಸುತ್ತಿರುವುದಕ್ಕೆ ಅನೇಕ ಕಾರಣಗಳಿವೆ. ರಾಷ್ಟ್ರೀಯ ಹೆದ್ದಾರಿ, ರೈಲ್ವೆ ಮತ್ತಿತರ ಅಭಿವೃದ್ಧಿ ಯೋಜನೆಗಳು, ಕೈಗಾರಿಕೆಗಳು, ಗಣಿಗಾರಿಕೆ, ಅದರಲ್ಲೂ ಪ್ರಮುಖವಾಗಿ ಕಲ್ಲಿದ್ದಲು ಮತ್ತು ಅದಿರು ಗಣಿಗಾರಿಕೆ ಹುಲಿಗಳ ಪಾಲಿಗೆ ಸಂಚಕಾರ ತರುತ್ತಿವೆ. ಇಂತಹ ಯೋಜನೆಗಳಿಗೆ ಕೇಂದ್ರ ಸರ್ಕಾರ ವಿವೇಚನೆ ಬಳಸದೆಯೇ ಹಸಿರು ನಿಶಾನೆ ತೋರಿಸುತ್ತಿರುವುದು ಹುಲಿಗಳ ಸಂತತಿ ರಕ್ಷಣೆ ನಿಟ್ಟಿನಲ್ಲಿ ದೊಡ್ಡ ಆತಂಕವನ್ನು ಸೃಷ್ಟಿಸಿದೆ. ರಾಷ್ಟ್ರೀಯ ಹೆದ್ದಾರಿ ಬೇಡ ಎಂದು ಯಾರೂ ಹೇಳುತ್ತಿಲ್ಲ. ಹೆದ್ದಾರಿಯು ಅತಿಸೂಕ್ಷ್ಮವಾದ ಹಾಗೂ ಮಹತ್ವದ ವನ್ಯಜೀವಿ ಆವಾಸಸ್ಥಾನಗಳ ಮೂಲಕವೇ ಹಾದು ಹೋಗಬೇಕೆಂಬ ಜಿಡ್ಡುತನ ಏಕೆ ಎಂಬುದೇ ಅರ್ಥವಾಗುವುದಿಲ್ಲ. ದೇಶದ ಉತ್ತರ–ದಕ್ಷಿಣಕ್ಕೆ 6 ಸಾವಿರ ಕಿಲೊ ಮೀಟರ್ ಉದ್ದದ ಕಾರಿಡಾರ್ ರಸ್ತೆ ನಿರ್ಮಿಸುವಾಗ ಅದು ಸಾಗುವ ಮಾರ್ಗದಲ್ಲಿ ಕೊಂಚ ಬದಲಾವಣೆ ಮಾಡಿದರೆ ಆಗುವ ನಷ್ಟವಾದರೂ ಏನು? ಹೆದ್ದಾರಿಗಾಗಿ ವನ್ಯಜೀವಿ ಆವಾಸಸ್ಥಾನಕ್ಕೆ ಧಕ್ಕೆ ಉಂಟು ಮಾಡಿ, ಪರಿಹಾರದ ರೂಪದಲ್ಲಿ ಬೇರೆ ಕಡೆ ಗಿಡ ನೆಡುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ ಎಂಬುದನ್ನು ನೆನಪಿಡಬೇಕು.

'ಹುಲಿ ಅಥವಾ ನಿಸರ್ಗದ ಸಂರಕ್ಷಣೆಯು ಅಭಿವೃದ್ಧಿಗೆ ಅಡ್ಡಿಯಾಗಿಲ್ಲ ಎಂಬ ವಿಚಾರದಲ್ಲಿ ನನಗೆ ಬಲವಾದ ನಂಬಿಕೆ ಇದೆ. ಹುಲಿ ಸಂರಕ್ಷಣೆಯನ್ನು ಆದ್ಯತೆಯಾಗಿ ಹೊಂದಿರದ ಕ್ಷೇತ್ರಗಳಲ್ಲೂ ಅವುಗಳ ರಕ್ಷಣೆಯ ಬಗ್ಗೆ ಕಾಳಜಿ ಮೂಡಿಸುವ ಮೂಲಕ ನಮ್ಮ ಕಾರ್ಯತಂತ್ರದಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾದ ಅಗತ್ಯವಿದೆ. ತನ್ಮೂಲಕ ಸಂರಕ್ಷಣಾ ಕಾರ್ಯವು ಅಭಿವೃದ್ಧಿ ವಿರೋಧಿಯಲ್ಲ, ಅದು ಅಭಿವೃದ್ಧಿ ಸಾಧಿಸಲು ಇರುವ ಮಾರ್ಗ ಎಂಬುದನ್ನು ನಿರೂಪಿಸಬೇಕಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಇತ್ತೀಚೆಗೆ ನಡೆದ ಏಷ್ಯಾ ಸಚಿವರ ಸಮ್ಮೇಳನದಲ್ಲಿ ಹೇಳಿದ್ದಾರೆ. ಆದರೆ, ಅವರ ಮಾತುಗಳು ರಾಷ್ಟ್ರೀಯ ನೀತಿಯಾಗಿ ಜಾರಿಗೆ ಬರುತ್ತಿಲ್ಲ. ವನ್ಯಜೀವಿಗಳ ಸಂರಕ್ಷಣೆ ವಿಚಾರದಲ್ಲಿ ಎದುರಾಗಿರುವ ದೊಡ್ಡ ತೊಡಕು ಇದು.

ಅಭಿವೃದ್ಧಿ ಚಟುವಟಿಕೆಗಳು ವನ್ಯಜೀವಿಗಳ ಆವಾಸಸ್ಥಾನಗಳನ್ನು ಸೀಳಿಕೊಂಡು ಹೋಗುವುದರಿಂದ ದೊಡ್ಡ ಬಿಕ್ಕಟ್ಟು ಸೃಷ್ಟಿಯಾಗುತ್ತಿದೆ. ಬೈಪಾಸ್ ನಿರ್ಮಿಸುವ ಮೂಲಕ ನಗರಗಳಲ್ಲಿ ಹೆದ್ದಾರಿ ಹಾದುಹೋಗುವುದನ್ನು ತಪ್ಪಿಸಲು ಸಾಧ್ಯವಾಗುತ್ತದೆ ಎಂದಾದರೆ ವನ್ಯಜೀವಿಗಳ ರಕ್ಷಣೆ ವಿಚಾರದಲ್ಲಿ ಇದು ಏಕೆ ಸಾಧ್ಯವಿಲ್ಲ? ಪರ್ಯಾಯ ಮಾರ್ಗೋಪಾಯಗಳನ್ನು ಕಂಡುಕೊಳ್ಳುವಷ್ಟರ ಮಟ್ಟಿಗೆ ಇಂದು ತಂತ್ರಜ್ಞಾನ ಮತ್ತು ವಿಜ್ಞಾನ ಕ್ಷೇತ್ರಗಳು ಬೆಳವಣಿಗೆ ಹೊಂದಿಲ್ಲವೇ?

ಹೆದ್ದಾರಿಯು ಹುಲಿಗಳ ಆವಾಸಸ್ಥಾನವನ್ನು ಸೀಳಿಕೊಂಡು ಹೋಗುವುದನ್ನು ತಪ್ಪಿಸಲು ಮೇಲ್ಸೇತುವೆ ಅಥವಾ ಕೆಳಸೇತುವೆ ನಿರ್ಮಾಣ, ನವೀನ ವಿನ್ಯಾಸದ ಸೇತುವೆ... ಹೀಗೆ ಅನೇಕ ಮಾರ್ಗೋಪಾಯಗಳಿವೆ. ಆದರೆ ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಇಂತಹ ಆಧುನಿಕ ತಂತ್ರಜ್ಞಾನ ಬಳಕೆ ಬಗ್ಗೆ ಆಸಕ್ತಿಯನ್ನೇ ಹೊಂದಿಲ್ಲ. ವನ್ಯಜೀವಿಗಳ ಸಂರಕ್ಷಣೆಗೆ ಗಂಭೀರ ಸಮಸ್ಯೆ ಎದುರಾಗಿರುವುದು ಕೈಗಾರಿಕೆಗಳ ಬೆಳವಣಿಗೆಗೆ ಉತ್ತೇಜನ ನೀಡುವ ಸರ್ಕಾರದ ನೀತಿಯಿಂದ. ವನ್ಯಜೀವಿಗಳನ್ನು ಉಳಿಸುವ ಬಗ್ಗೆ ಕಾಳಜಿ ವಹಿಸಬೇಕಾದ ಪರಿಸರ ಸಚಿವಾಲಯವು ಬಾಗಿಲು ತೆರೆದು ಎಲ್ಲ ಕೈಗಾರಿಕಾ ಯೋಜನೆಗಳಿಗೆ ಕಣ್ಣು ಮುಚ್ಚಿ ಅನುಮತಿ ನೀಡುತ್ತಿದೆ. ಅಭಿವೃದ್ಧಿ ಹಾಗೂ ಸಂರಕ್ಷಣೆ ನಡುವೆ ಸಮತೋಲನ ಸಾಧಿಸುವ ವಿಚಾರದಲ್ಲಿ ಸೂಕ್ಷ್ಮಮತಿ ಪ್ರದರ್ಶಿಸಬೇಕಾದ ಸಚಿವಾಲಯದ ಈ ನಡೆ ಆಘಾತಕಾರಿ.

ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಕ್ಕೆ ಬಳಸಿದರೆ ಅದಕ್ಕೆ ದಂಡ ಪಾವತಿಸಬೇಕು. ಅರಣ್ಯೀಕರಣ ಪರಿಹಾರ ನಿಧಿ ನಿರ್ವಹಣೆ ಮತ್ತು ಯೋಜನಾ ಪ್ರಾಧಿಕಾರದ (ಕ್ಯಾಂಪ) ಖಾತೆಯಲ್ಲಿ ಇದುವರೆಗೆ ₹40 ಸಾವಿರ ಕೋಟಿ ಜಮೆಯಾಗಿದೆ. ಗಿಡ ನೆಡುವ ಕಾರ್ಯಕ್ರಮಗಳಿಗೂ ಈ ಹಣ ಬಳಸಲಾಗುತ್ತಿದೆ. ಇದರಿಂದ ಅರಣ್ಯ ಸಂರಕ್ಷಣೆಯ ಉದ್ದೇಶ ಸಾಕಾರ ಆಗುವುದಿಲ್ಲ. ಇದು ಹಣ ದುರ್ಬಳಕೆಗೆ ದಾರಿ ಮಾಡಿಕೊಟ್ಟಂತೆ. ಗಿಡ ನೆಡುವುದಕ್ಕೆ ಹಣಕಾಸಿನ ವ್ಯವಸ್ಥೆ ಕಲ್ಪಿಸಲು ಬೇರೆ ಅನೇಕ ಮಾರ್ಗೋಪಾಯಗಳಿವೆ. ಈ ಹಣವನ್ನು ಅರಣ್ಯ ಛಿದ್ರೀಕರಣ ತಡೆಯುವ ಉದ್ದೇಶಕ್ಕೆ ಮಾತ್ರ ಬಳಸಬೇಕು ಎಂದು ನಾನು ಸಲಹೆ ನೀಡಿದ್ದೆ. ಆದರೆ ಅದನ್ನು ಸರ್ಕಾರ ಒಪ್ಪಿಲ್ಲ. ವನ್ಯಜೀವಿಗಳ ನೆಲೆಯಿಂದ ಸ್ವಯಂಪ್ರೇರಿತರಾಗಿ ಹೊರ ಬರಲು ಬಯಸುವವರಿಗೆ ಪರಿಹಾರ, ಪುನರ್ವಸತಿ ಕಲ್ಪಿಸಲು ಕ್ಯಾಂಪ ನಿಧಿ ಬಳಸಲು ಕೇಂದ್ರ ಇತ್ತೀಚೆಗೆ ಅನುಮತಿ ನೀಡಿರುವುದು ಸಕಾರಾತ್ಮಕ ಬೆಳವಣಿಗೆ.

ಅರಣ್ಯ ಒತ್ತುವರಿ ಇನ್ನೊಂದು ದೊಡ್ಡ ಸಮಸ್ಯೆ. ಅರಣ್ಯ ಮತ್ತು ಪರಿಸರ ಸಚಿವರ ಪ್ರಕಾರ, ದೇಶದಲ್ಲಿ ಇದುವರೆಗೆ 18.99 ಲಕ್ಷ ಹೆಕ್ಟೇರ್ ಅರಣ್ಯ ಒತ್ತುವರಿಯಾಗಿದೆ. ಅಂದರೆ ಸರಿಸುಮಾರು 19 ಸಾವಿರ ಚದರ ಕಿ.ಮೀ.ನಷ್ಟು ಅರಣ್ಯವನ್ನು ಕಳೆದುಕೊಂಡಿದ್ದೇವೆ. ಇದು ಒಂದು ರಾಜ್ಯದ ಗಾತ್ರಕ್ಕೆ ಸಮ. ಅರಣ್ಯ ಹಕ್ಕು ಕಾಯ್ದೆ ಅಡಿ ಜನರಿಗೆ ಭೂಮಿ ಹಕ್ಕು ನೀಡುವುದರಿಂದ 25 ಲಕ್ಷ ಹೆಕ್ಟೇರ್ ಅರಣ್ಯಕ್ಕೆ ಕುತ್ತು ಬರುವ ಆತಂಕವಿದೆ. ಇದೊಂದು ಮುಗಿಯದ ಕತೆ.

ಹಿಂದಿನ ಯುಪಿಎ ಸರ್ಕಾರ ವನ್ಯಜೀವಿ ಕಾಯ್ದೆಗೆ ತಿದ್ದುಪಡಿ ತಂದು, ದಂಡ ಹೆಚ್ಚು ಮಾಡಿದೆವು ಎಂದು ಹೇಳಿಕೊಂಡಿತು. ಶಿಕ್ಷೆ ಪ್ರಮಾಣ ಹೆಚ್ಚು ಮಾಡುವುದರಿಂದ ಏನೂ ಆಗುವುದಿಲ್ಲ. ವನ್ಯಜೀವಿಗಳ ಸಂರಕ್ಷಣೆಗೆ ಈಗಿರುವ ಕಾನೂನುಗಳು ಸಾಕಷ್ಟು ಪ್ರಬಲವಾಗಿವೆ. ಅವನ್ನು ಸಮರ್ಪಕವಾಗಿ ಅನುಷ್ಠಾನ ಮಾಡಿದರೆ ಸಾಕು.

ಪರಿಸರ ಸಂಬಂಧಿ ಕಾಯ್ದೆಗಳಿಗೆ ತಿದ್ದುಪಡಿ ತರುವ ಸಲುವಾಗಿ ಕೇಂದ್ರ ಸರ್ಕಾರ ಟಿ.ಎಸ್.ಆರ್. ಸುಬ್ರಮಣಿಯನ್ ಸಮಿತಿಯನ್ನು ರಚಿಸಿತ್ತು. ಈ ಸಮಿತಿಯ ಶಿಫಾರಸುಗಳು ಅಪಾಯಕಾರಿಯಾಗಿದ್ದವು. ಅದೃಷ್ಟವಶಾತ್ ಸಂಸತ್ತಿನ ಉಪಸಮಿತಿ ಈ ಶಿಫಾರಸುಗಳನ್ನು ತಿರಸ್ಕರಿಸಿತು. ಕಾನೂನು ತಿದ್ದುಪಡಿ ಮಾಡದಿದ್ದರೂ ಕೆಲವು ಸುತ್ತೋಲೆಗಳು ಹಾಗೂ ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸುವ ಮೂಲಕ ಕಾನೂನು ಸಡಿಲ ಮಾಡುವ ಪ್ರಯತ್ನ ನಡೆಯುತ್ತಿರುವುದು ಆತಂಕಕಾರಿ. ಉದಾಹರಣೆಗೆ, ಈ ಹಿಂದೆ ಗಣಿಗಾರಿಕೆಗೆ ಗುತ್ತಿಗೆ ಅವಧಿ 30 ವರ್ಷಗಳಿಗೆ ಸೀಮಿತವಾಗಿತ್ತು. ಖನಿಜ ವಿನಾಯಿತಿ ನಿಯಮಗಳಲ್ಲಿ (ಮಿನರಲ್ ಕನ್‌ಸೆಷನ್ ರೂಲ್ಸ್) ಬದಲಾವಣೆ ತಂದು ಈ ಅವಧಿಯನ್ನು 50 ವರ್ಷಗಳವರೆಗೆ ವಿಸ್ತರಿಸಲಾಗಿದೆ. ಇದೊಂದು ರೀತಿ ಹಿತ್ತಲಬಾಗಿಲಿನಿಂದ ಪ್ರವೇಶ ಮಾಡಿದಂತೆ.

ದೇಶದಲ್ಲಿ ಶೇ 4ರಷ್ಟು ಭೂಪ್ರದೇಶವನ್ನು ಮಾತ್ರ ವನ್ಯಜೀವಿಗಳ ಸಂರಕ್ಷಣೆಗೆ ಕಾಯ್ದಿರಿಸಲಾಗಿದೆ. ಉಳಿದ ಶೇ 96ರಷ್ಟು ಭೂಪ್ರದೇಶವನ್ನು ಬಳಸಿಕೊಂಡ ಬಳಿಕವೂ ನಮಗೆ ಸಾಮಾಜಿಕ ನ್ಯಾಯ ಕಲ್ಪಿಸಲು ಸಾಧ್ಯವಾಗಿಲ್ಲ. ಈಗಲೂ ಕಾಲ ಮಿಂಚಿಲ್ಲ. ವಿಜ್ಞಾನ, ತಂತ್ರಜ್ಞಾನದ ನೆರವೂ ಲಭ್ಯ. ಹಣದ ಕೊರತೆ ಇಲ್ಲ. ಆದರೆ ರಾಜಕೀಯ ಇಚ್ಛಾಶಕ್ತಿಯ ಕೊರತೆ ಇದೆ. ತಳಮಟ್ಟದಲ್ಲೇ ಸಕಾರಾತ್ಮಕ ಬದಲಾವಣೆ ತರಲು ರಾಷ್ಟ್ರೀಯ ನೀತಿ ರೂಪಿಸುವುದು ತುರ್ತಾಗಿ ಆಗಬೇಕಾದ ಕೆಲಸ.

ನಿರೂಪಣೆ: ಪಿ.ವಿ.ಪ್ರವೀಣ್ ಕುಮಾರ್

ಎಷ್ಟು ಹುಲಿಗಳಿವೆ?

ದೇಶ	2010	2011	2016
ಭಾರತ	1,706	1,411	2,226
ಬಾಂಗ್ಲಾದೇಶ	440	440	106
ನೇಪಾಳ	155/198	155	198
ಭೂತಾನ್	50/75	75	103
ರಷ್ಯಾ	360	360	433
ಇಂಡೊನೇಷ್ಯಾ	225/670	325	371
ಮಲೇಷ್ಯಾ	300	500	250
ಚೀನಾ	7	45	7
ಥಾಯ್ಲೆಂಡ್	185/221	200	189
ಲಾವೊ ಪಿಡಿಆರ್	2/17	17	2
ವಿಯೆಟ್ನಾಂ	5/20	10	5
ಮ್ಯಾನ್ಮಾರ್	7	85	-
ಕಾಂಬೋಡಿಯ	20	20	0
ಒಟ್ಟು	3,068- 4041	3,643	3,890

ಆಧಾರ: ಇಂಟರ್‌ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಷನ್ ಆಫ್ ನೇಚರ್ (ಐಯುಸಿಎನ್)
ಗ್ಲೋಬಲ್ ಟೈಗರ್ ರಿಕವರಿ ಪ್ರೋಗ್ರಾಂ (ಜಿಟಿಆರ್‌ಪಿ)

ಸಭೆಯೇ ನಡೆದಿಲ್ಲ

ದೇಶದಲ್ಲಿ ವನ್ಯಜೀವಿಗಳ ಸಂರಕ್ಷಣೆ ಹೊಣೆ ಹೊತ್ತಿರುವುದು ಸಂವಿಧಾನಬದ್ಧ ಸಂಸ್ಥೆಯಾದ ರಾಷ್ಟ್ರೀಯ ವನ್ಯಜೀವಿ ಮಂಡಳಿ. ಪ್ರಧಾನಿ ಇದರ ಅಧ್ಯಕ್ಷರು. ಮಂಡಳಿಯಲ್ಲಿ 47 ಸದಸ್ಯರು ಇರಬೇಕು. ಅವರಲ್ಲಿ 10 ಸದಸ್ಯರು ಪರಿಸರ ವಿಜ್ಞಾನಿಗಳು ಹಾಗೂ ಐವರು ಸ್ವಯಂಸೇವಾ ಸಂಸ್ಥೆಗಳನ್ನು ಪ್ರತಿನಿಧಿಸುವವರಾಗಿರಬೇಕು. ಉಳಿದವರು ಸಂಸದರು, ರಾಜ್ಯ ಸರ್ಕಾರದ ಪ್ರತಿನಿಧಿಗಳು, ಅಧಿಕಾರಿಗಳು. ಭಾರಿ ಯೋಜನೆಗಳಿಗೆ ಮಂಡಳಿಯ ಅನುಮತಿ ಪಡೆಯುವುದು ತೀರಾ ಮುಖ್ಯ. ಅಚ್ಚರಿಯೆಂದರೆ ಮಂಡಳಿ ಎರಡು ವರ್ಷಗಳಲ್ಲಿ ಒಂದು ಸಭೆಯನ್ನೂ ನಡೆಸಿಲ್ಲ. ಈಗಿನ ಎನ್‌ಡಿಎ ಸರ್ಕಾರ ಮಂಡಳಿ ರಚನೆ ಬಗ್ಗೆ ತಲೆಯನ್ನೇ ಕೆಡಿಸಿಕೊಂಡಿರಲಿಲ್ಲ. ಸುಪ್ರೀಂ ಕೋರ್ಟ್ ಮಧ್ಯ ಪ್ರವೇಶದ ಬಳಿಕವಷ್ಟೇ ಕೆಲವು ಸದಸ್ಯರನ್ನು ನೇಮಿಸಲಾಯಿತು.

ವನ್ಯಜೀವಿ ಸಂರಕ್ಷಣೆಗೆ ಸಂಬಂಧಿಸಿದ ಹೆಚ್ಚಿನ ಅಧ್ಯಯನಕ್ಕಾಗಿ ಮಂಡಳಿಯು ಸ್ಥಾಯಿ ಸಮಿತಿಗಳನ್ನು ರಚಿಸಬಹುದು. ಮಂಡಳಿ ಪೂರ್ಣ ಪ್ರಮಾಣದಲ್ಲಿ ರಚನೆಯಾಗದಿದ್ದರೂ ಐವರು ಸದಸ್ಯರ ಸ್ಥಾಯಿ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿ ಎರಡು ವರ್ಷಗಳಲ್ಲಿ 8 ಬಾರಿ ಸಭೆ ಸೇರಿದೆ. 301 ಯೋಜನೆಗಳನ್ನು ಪರಿಶೀಲಿಸಿದ್ದು ಈ ಪೈಕಿ ಕೇವಲ ನಾಲ್ಕು ಯೋಜನೆಗಳನ್ನು ತಿರಸ್ಕರಿಸಿದೆ. ಶೇಕಡ 1.29ರಷ್ಟು ಯೋಜನೆಗಳು ಮಾತ್ರ ತಿರಸ್ಕೃತಗೊಂಡಿರುವುದು ಅನುಮಾನಗಳಿಗೆ ಎಡೆಮಾಡಿಕೊಡುತ್ತಿದೆ. ಮಂಡಳಿಯ ಆದೇಶದಂತೆ ಕಾರ್ಯ ನಿರ್ವಹಿಸಬೇಕಾದ ಸ್ಥಾಯಿ ಸಮಿತಿಯು ಮಂಡಳಿಯ ಮೇಲೇ ಪ್ರಭುತ್ವ ಸಾಧಿಸಿದಂತಿದೆ. ಇದರಿಂದ ಮಂಡಳಿಯ ಪರಿಸ್ಥಿತಿ ನಾಯಿಯನ್ನೇ ಬಾಲ ಅಲ್ಲಾಡಿಸಿದಂತಾಗಿದೆ.

ಜನಜಾಗೃತಿಗೆ ಯತ್ನ

ಚಾಮರಾಜನಗರ ವೃತ್ತದಲ್ಲಿ ಹುಲಿಗಳ ಸಂಖ್ಯೆ ಹೆಚ್ಚುತ್ತಿದೆ. ಬಿಳಿಗಿರಿರಂಗನ ಬೆಟ್ಟವನ್ನು ದಾಟಿ ಮಲೆಮಹದೇಶ್ವರ ಬೆಟ್ಟದ ಅರಣ್ಯದಲ್ಲೂ ಹುಲಿಗಳು ವಾಸಿಸುವುದು ಇದಕ್ಕೆ ಸಾಕ್ಷಿ. ಬಿಳಿಗಿರಿರಂಗನ ಬೆಟ್ಟದಲ್ಲಿ 60 ಹುಲಿಗಳು ಇದ್ದರೆ, ಮಲೆಮಹದೇಶ್ವರಬೆಟ್ಟದಲ್ಲಿ 15ರಿಂದ 18 ಹುಲಿಗಳು ಇವೆ.

ಹುಲಿ ರಕ್ಷಣಾ ವಿಶೇಷ ಪಡೆ ಇಲ್ಲಿ ಇಲ್ಲ. ಆದರೆ, ಆ್ಯಂಟಿ ಪೋಚಿಂಗ್ ಶಿಬಿರಗಳು ಇವೆ (ಸುಮಾರು 115). ಇವುಗಳಲ್ಲಿ ಸ್ಥಳೀಯರೇ ಅಧಿಕ ಮಂದಿ ಇದ್ದಾರೆ. ಇವರು ಯಶಸ್ವಿಯಾಗಿ ಹುಲಿ ಸಂರಕ್ಷಣೆ ಮಾಡುತ್ತಿದ್ದಾರೆ. ಬೇಸಿಗೆಯಲ್ಲಿ ಕಾಳ್ಗಿಚ್ಚು ಉಂಟಾಗದಂತೆ ಕಟ್ಟೆಚ್ಚರ ವಹಿಸಲಾಗುತ್ತಿದೆ. ನೀರಿನ ಹೊಂಡಗಳನ್ನು ನಿರ್ಮಿಸಲಾಗುತ್ತಿದೆ. ಕಳೆದ ವರ್ಷದಿಂದ ಈಚೆಗೆ ಯಾವುದೇ ಹುಲಿ ಬೇಟೆಗಾರರ ಪಾಲಾಗಿಲ್ಲ.

ಬಿ.ಪಿ.ರವಿ

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಚಾಮರಾಜನಗರ ವೃತ್ತ

ವಾಹನಗಳಿಗೆ ವೇಗಮಿತಿ

ಕಾಳಿ ಹುಲಿ ಸಂರಕ್ಷಿತಾರಣ್ಯ (ಕೆಟಿಆರ್) ಪ್ರದೇಶವು 1,345 ಚದರ ಕಿಲೊ ಮೀಟರ್ ವಿಸ್ತೀರ್ಣ ಹೊಂದಿದ್ದು, ಸುಮಾರು 20 ಹುಲಿಗಳಿವೆ. 2013ರಲ್ಲಿ ನಡೆದ ಹುಲಿ ಗಣತಿಯಲ್ಲಿ ಈ ಭಾಗದಲ್ಲಿ 18 ಹುಲಿಗಳು ಕಂಡುಬಂದಿದ್ದವು. ಇಲ್ಲಿನ ಹುಲಿಗಳು ಹಾಗೂ ಇತರ ವನ್ಯಜೀವಿಗಳ ಸಂರಕ್ಷಣೆಗೆ ಹಲವಾರು ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದ್ದೇವೆ.

ಇಲ್ಲಿರುವ 43 ಕಳ್ಳಬೇಟೆ ತಡೆ ಶಿಬಿರಗಳಲ್ಲಿನ ಸಿಬ್ಬಂದಿಗೆ ಸುಸಜ್ಜಿತ ವೈರ್‌ಲೆಸ್ ಸೆಟ್‌ಗಳನ್ನು ನೀಡಲಾಗಿದ್ದು, ಇದರಿಂದ ಅವರು ಗಸ್ತು ಕಾರ್ಯದ ಬಗ್ಗೆ ನಿಗಾ ಇರಿಸಲು ಅನುಕೂಲವಾಗಿದೆ. ಅವರು ಬೆಳಿಗ್ಗೆ ಗಸ್ತು ಕಾರ್ಯಕ್ಕೆ ಹೊರಡುತ್ತಿದ್ದಂತೆ ಈ ಸೆಟ್‌ನಲ್ಲಿನ 'ಸ್ಟಾರ್ಟ್' ಎನ್ನುವ ಗುಂಡಿಯನ್ನು ಒತ್ತಬೇಕು. ಆನಂತರ ಅವರು ಯಾವ ದಿಕ್ಕು, ಯಾವ ಪ್ರದೇಶದಲ್ಲಿ ಗಸ್ತು ತಿರುಗುತ್ತಿದ್ದಾರೆ ಎನ್ನುವುದನ್ನು ನಾವು ಕುಳಿತಲ್ಲೇ ಪರಿಶೀಲಿಸಬಹುದು. ಅಲ್ಲದೆ ಗಸ್ತು ಕಾರ್ಯಾಚರಣೆಯಲ್ಲಿ ಬಿಟ್ಟುಹೋಗಿರುವ ಸ್ಥಳಗಳಿಗೆ ಹೋಗುವಂತೆ ಸೂಚಿಸಲು ಇದು ಅನುಕೂಲವಾಗಿದೆ. ಸಿಬ್ಬಂದಿಯ ಕಾರ್ಯಕ್ಷಮತೆಯೂ ಹೆಚ್ಚಾಗಿದೆ.

ಅರಣ್ಯದಲ್ಲಿ ಸುಮಾರು 100 ಕ್ಯಾಮೆರಾಗಳನ್ನು ಅಳವಡಿಸಿದ್ದೇವೆ. ಕಳೆದ ವರ್ಷ ರಾತ್ರಿ ವೇಳೆ ಆಯುಧ ಹಿಡಿದು ಸಂಚರಿಸುತ್ತಿದ್ದ ನಾಲ್ವರು ಬೇಟೆಗಾರರನ್ನು ಇದರಿಂದ ಪತ್ತೆಹಚ್ಚಲು ಸಾಧ್ಯವಾಯಿತು. ಅಲ್ಲದೆ ಅವರ ವಿರುದ್ಧ ಶಸ್ತ್ರಾಸ್ತ್ರ ಕಾಯ್ದೆಯಡಿ ಪ್ರಕರಣ ದಾಖಲಿಸಲಾಯಿತು. ಕಾಡಿನಲ್ಲಿ ಹಾದು ಹೋಗಿರುವ ಪ್ರಮುಖ ರಸ್ತೆಗಳಲ್ಲಿ ವಾಹನಗಳ ವೇಗಮಿತಿ ನಿಯಂತ್ರಿಸುವ ಸಲುವಾಗಿ ರಸ್ತೆ ಉಬ್ಬುಗಳನ್ನು ನಿರ್ಮಿಸಿದ್ದೇವೆ. ಭಾರಿ ವಾಹನಗಳ ಸಂಚಾರಕ್ಕೆ ನಿರ್ಬಂಧ ಹಾಕಲಾಗಿದೆ. ಕಾಡಿನಲ್ಲಿ ಪ್ಲಾಸ್ಟಿಕ್ ವಸ್ತು ಬಿಸಾಡದಂತೆ ಪ್ರವಾಸಿಗರಲ್ಲಿ ಅರಿವು ಮೂಡಿಸಲಾಗುತ್ತಿದೆ.

ಶ್ರೀನಿವಾಸಲು

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಹುಲಿ ಯೋಜನೆ ನಿರ್ದೇಶಕರು (ಕೆಟಿಆರ್)

ವನ್ಯಜೀವಿಗಳಿಗೆ ಅಭಯ

ಇಡೀ ದೇಶದಲ್ಲಿ ಹುಲಿ ಸಂರಕ್ಷಣಾ ಯೋಜನೆ ಅತ್ಯಂತ ಯಶಸ್ವಿಯಾಗಿ ಮತ್ತು ಪರಿಣಾಮಕಾರಿ ಅನುಷ್ಠಾನದಲ್ಲಿರುವ ಅಭಯಾರಣ್ಯಗಳಲ್ಲಿ ಭದ್ರಾ ಹುಲಿ ಸಂರಕ್ಷಿತ ಅಭಯಾರಣ್ಯ ಮುಂಚೂಣಿಯಲ್ಲಿದೆ. ಕಳೆದ 10 ವರ್ಷಗಳ ಅಂಕಿ ಅಂಶ ತೆಗೆದು ನೋಡಿ, ಒಂದೇ ಒಂದು ಹುಲಿ, ಆನೆ ಬೇಟೆಗಾರರ ಬಂದೂಕಿಗೆ ಬಲಿಯಾದ, ಜಾ ಟ್ರ್ಯಾಪಿಗೆ ಸಿಕ್ಕಿ ಜೀವತೆತ್ತ ಅಥವಾ ಬೆಂಕಿ ಅವಘಡ ಸಂಭವಿಸಿ ಅರಣ್ಯ ನಾಶವಾದ ಪ್ರಕರಣ ನಿಮಗೆ ಭದ್ರಾ ಅಭಯಾರಣ್ಯ ವ್ಯಾಪ್ತಿಯಲ್ಲಿ ಕಾಣಸಿಗುವುದಿಲ್ಲ. ಸರ್ಕಾರದ ಒತ್ತಾಸೆ, ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಯ ಮುತುವರ್ಜಿ, ಜನರ ಸಹಭಾಗಿತ್ವದಿಂದಾಗಿ ಇಂದು ಹುಲಿ ಸಂರಕ್ಷಣೆಯಲ್ಲಿ ಈ ಪ್ರದೇಶ ದೇಶದ ಗಮನ ಸೆಳೆಯುತ್ತಿದೆ.

ಸುಮಾರು 500 ಚದರ ಕಿ.ಮೀ. ವಿಸ್ತೀರ್ಣದ 'ಕೋರ್ ಜೋನ್' ಹೊಂದಿರುವ ಅಭಯಾರಣ್ಯ ಹುಲಿ ಸಂರಕ್ಷಣೆಗೆ ಹೇಳಿ ಮಾಡಿಸಿದ ತಾಣ ಎನ್ನುವುದು ವೈಜ್ಞಾನಿಕವಾಗಿಯೂ ಸಾಬೀತಾಗಿದೆ. ಇಲ್ಲಿ ಹುಲಿ ಸಂರಕ್ಷಣೆಗೆ ಕೈಗೊಂಡ ಅತ್ಯಂತ ಪರಿಣಾಮಕಾರಿ ಯೋಜನೆಗಳಿಂದಾಗಿ ಕಳ್ಳ ಬೇಟೆ, ಮರ ಕಡಿತಲೆ, ಬೆಂಕಿ ಅವಘಡ ಸಂಪೂರ್ಣ ನಿಯಂತ್ರಣಕ್ಕೆ ಬಂದಿವೆ. ಕಳೆದ ವರ್ಷ ಬರದ ಛಾಯೆ ಇದ್ದರೂ ಅಭಯಾರಣ್ಯದಲ್ಲಿ ಪ್ರಾಣಿಗಳಿಗೆ ಕುಡಿಯುವ ನೀರು, ಮೇವಿನ ಕೊರತೆ ಕಾಣಿಸಲಿಲ್ಲ. ಅಷ್ಟರಮಟ್ಟಿಗೆ ಇಲ್ಲಿ ವನ್ಯಜೀವಿಗಳಿಗೆ 'ಅಭಯ'ವಿದೆ. ಹುಲಿ ಸಂತತಿ ಆಶಾದಾಯಕವಾಗಿದೆ. ಅಂದಾಜು 30 ಹುಲಿಗಳು ವಾಸಿಸುತ್ತಿರುವುದು ಕ್ಯಾಮೆರಾ ಟ್ರ್ಯಾಪಿಂಗ್‌ನಲ್ಲಿ ಕಂಡುಬಂದಿದೆ. ಇನ್ನೂ ಸುಮಾರು 50 ಹುಲಿಗಳ ಆವಾಸಕ್ಕೆ ಬೇಕಾಗುವಷ್ಟು ಅರಣ್ಯ ವಿಸ್ತೀರ್ಣವಿದೆ.

ಪಿ.ಬಿ.ಕರುಣಾಕರ

ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕ, ಭದ್ರಾ ಹುಲಿ ಸಂರಕ್ಷಿತ ಅಭಯಾರಣ್ಯ

ಕಟ್ಟುನಿಟ್ಟಿನ ತನಿಖೆ

ಪ್ರತಿ ಹುಲಿಯ ಸಾವನ್ನು ಅನುಮಾನಾಸ್ಪದ ದೃಷ್ಟಿಯಿಂದಲೇ ನಾವು ನೋಡುತ್ತೇವೆ. ಅದರ ಒಳ ಅಂಗಾಂಗಳನ್ನೆಲ್ಲಾ ತಪಾಸಣೆ ಮಾಡಿ ಅದರದು ನೈಸರ್ಗಿಕ ಸಾವು ಎಂದು ಖಚಿತವಾದ ಬಳಿಕವಷ್ಟೇ ತನಿಖೆ ಮುಗಿಸುತ್ತೇವೆ. ಕಳೆದ ನಾಲ್ಕು ವರ್ಷಗಳಿಂದ ಮೈಸೂರು ವಲಯದ ಬಂಡೀಪುರ ಹಾಗೂ ನಾಗರಹೊಳೆ ಹುಲಿ ರಕ್ಷಿತಾರಣ್ಯದಲ್ಲಿ ಯಾವುದೇ ಹುಲಿಯು ಬೇಟೆಗಾರರಿಗೆ ಸಿಕ್ಕಿಲ್ಲ. ಕಳ್ಳಬೇಟೆ ತಡೆಯಲು ವ್ಯಾಪಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಎಲ್ಲಿಯಾದರೂ ಬೇಟೆಯಂತಹ ಪ್ರಕರಣಗಳು ವರದಿಯಾದರೆ, ಅನುಮಾನಾಸ್ಪದ ವ್ಯಕ್ತಿಗಳು ಸುಳಿದಾಡುತ್ತಿದ್ದರೆ ಅಂತಹವರನ್ನು ವಶಕ್ಕೆ ತೆಗೆದುಕೊಂಡು ತೀವ್ರ ವಿಚಾರಣೆ ನಡೆಸಲಾಗುತ್ತದೆ.

ಹುಲಿ ಆವಾಸಸ್ಥಾನಗಳನ್ನು ಅಭಿವೃದ್ಧಿಪಡಿಸುವ ಮೂಲಕ ಹುಲಿಗೆ ಎಲ್ಲ ಅಗತ್ಯಗಳು ಪೂರೈಕೆಯಾಗುವಂತೆ ನಿಗಾ ವಹಿಸಲಾಗಿದೆ. ಬೇಸಿಗೆಯಲ್ಲಿ ನೀರಿಗೆ ತೊಂದರೆಯಾಗಬಾರದು ಎಂದು ಕಾಡಿನ ಅಲ್ಲಲ್ಲಿ ಹೊಂಡಗಳನ್ನು ನಿರ್ಮಿಸಲಾಗುತ್ತದೆ. ಹುಲಿಗೆ ಆಹಾರವಾಗುವಂತಹ ಪ್ರಾಣಿಗಳ ಮೇಲೂ ನಿಗಾ ವಹಿಸಲಾಗುತ್ತದೆ. ಇದರಿಂದ ವರ್ಷದಿಂದ ವರ್ಷಕ್ಕೆ ಹುಲಿಗಳ ಸಂಖ್ಯೆ ಹೆಚ್ಚುತ್ತಿದೆ.

ಜಿ.ವಿ.ರಂಗರಾವ್

ಹುಲಿ ಯೋಜನೆಯ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮೈಸೂರು ವೃತ್ತ

ಅಭಿಪ್ರಾಯ ಸಂಗ್ರಹ:
ಪಿ.ಕೆ.ರವಿಕುಮಾರ್, ಕೆ.ಎಂ.ಸಂತೋಷ್‌ಕುಮಾರ್, ಜಿ.ಬಿ.ನಾಗರಾಜ್